

ಎಡದಿಂದ ಬಲಕ್ಕೆ:

| | | |
|---|---|---|
| 1. | ಸಂತರ್ಪಣೆಯ ಕಾರ್ಯ ತೃಪ್ತಿಕರವಾಗಿದೆ | 4 |
| 3. | ಸಂದೇಹಗಳ ನಿವಾರಣೆಗೆ ಎಲ್ಲರೊಡನೆ ಚರ್ಚೆ | 3 |
| 4. | ಸುರಲೋಕದಿಂದ ಬಂದಿದ್ದೇನು ಈ ಮಾವಿನ ಫಲ? | 3 |
| 6. | ವಸ್ತು ವಿನಿಯೋಗದ ಕ್ರಮಗಳನ್ನೆಲ್ಲ ಬದಲಿಸಿತು ಈ ಹೊಸ ಕಾಲಾವಧಿ | 4 |
| 7. | ಎಲ್ಲವೂ ಸಮಾಪ್ತಿಗೊಂಡಿದ್ದು ಪಕ್ಷದ ಏಳನೆಯ ದಿನ | 3 |
| 9. | ಕೆಟ್ಟ ಕೆಲಸಗಳ ಫಲ ಈ ವಿಪತ್ತು | 3 |
| 11. | ಹಾಡುಗಾರರೆಲ್ಲ ಒಟ್ಟಾಗಿ ಪಯಣಿಸಲು ಭಾರೀ ನೌಕೆ | 3 |
| 13. | ಸಾಹಸವನ್ನು ಮಾಡುವ ಕಲ್ಪನೆ ಕೈಗೂಡಿತು ತಾನೇ? | 3 |
| 15. | ಆಚಾರಗಳ ಪಾಲನೆಯಲ್ಲಿ ಏನೋ ದೋಷ ಸಂಭವಿಸಿದೆ | 4 |
| 17. | ರಾಷ್ಟ್ರಭಕ್ತಿಯನ್ನು ಪ್ರದರ್ಶಿಸಲು ಬಳಸಿದ ಸಂಗೀತ ಸ್ವರ ಯಾವುದು? | 3 |
| 18. | ಜ್ಯೇಷ್ಠತನ ಉಳಿಯಬೇಕೆಂದರೆ ಜೋಪಾನ ಇರಲಿ | 3 |
| 19. | ಕಣ್ಣೆಯಲ್ಲಿ ತೇಲುವವರಿಗೆ ಕಾಣಬಹುದೇ 'ದೇವತೆಗಳ ಪ್ರಪಂಚ'? | 4 |

ಮೇಲಿಂದ ಕೆಳಕ್ಕೆ:

| | | |
|---|---|---|
| 1. | ಮಹಾನ್ ಸಾಧನೆಗಳಿಗೆ ಕೇಂದ್ರವಾದದ್ದು ಇದೇ ಮನೆ | 3 |
| 2. | ಕೈಗಾರಿಕೆಗಳ ಪ್ರದೇಶದಲ್ಲಿ ಕೂಡ ಹೊರುವ ಉತ್ಸವ | 3 |
| 3. | ಯುದ್ಧ ಸಂತ್ರಸ್ತರ ಕಷ್ಟ ಕಂಡು ಆತ ವ್ಯಥಿತನಾದ | 3 |
| 5. | ಲಲನೆಯರ ತಳ್ಳಾಟದಲ್ಲಿ ಏಟು ತಿಂದಿದ್ದು ಹಣೆ | 3 |
| 7. | ಮಹಿಷಾಸುರನ ಪ್ರತಿಮೆಯ ಕಡೆಗೆ ಭಾರೀ ಆಸೆ ಆಕರ್ಷಣೆ | 3 |
| 8. | ಆ ಮಂಗನ ಕಣ್ಣಲ್ಲಿ ಎಂಥ ಹೊಳಪಿದೆ ನೋಡಿದಿರಾ? | 3 |
| 9. | ಮಹಾ ಕೋಪಿಷ್ಠರನ್ನು ಕಂಡರೇ ನಡುಕ | 3 |
| 10. | ಎಲ್ಲರ ಸಂಕಟಗಳೂ ನಿರ್ಮೂಲವಾದಂತೆ ಒಂದು ನಿದ್ರಾ ದೃಶ್ಯ | 3 |
| 12. | ಬೇಡವಾದದ್ದನ್ನೆಲ್ಲ ಇರಿಸಲು ಒಂದು ಅಗಲ ಬಾಯಿಯ ಪಾತ್ರೆ | 3 |
| 14. | ಮುನಿಸನ್ನು ತ್ಯಜಿಸಿದವರ ಸಾಧನೆಗೆ ವಂದನೆ | 3 |
| 15. | ಅಭ್ಯಾಸ ಚೆನ್ನಾಗಿ ಮಾಡಿದರೆ ಅದೇ ಭದ್ರ ರಕ್ಷಣೆ | 3 |
| 16. | ಕಾರಂಜಿಯಲ್ಲೇ ತನ್ನ ಕಾರ್ಯ ಆರಂಭಿಸಿದ ಅಗಸ | 3 |

### 18.4.2019 ಉತ್ತರಗಳು

ಎಡದಿಂದ ಬಲಕ್ಕೆ:

1. ಸಂಪ್ರದಾನ 3. ವಲ್ಲಭ 4. ಕುಹಕ 6. ವರ್ಷಾಕಾಲ 7. ಅನಂತರ 9. ಭವ್ಯಕೃತಿ 11. ತಳಹದಿ 13. ನಿಶಾಚರಿ 15. ಬಾಣಸಿಗ 17. ತುಮುಲ 18. ಮಾರುತ 19. ಕನಿಕರ

ಮೇಲಿಂದ ಕೆಳಕ್ಕೆ:

1. ಸಂಭವ 2. ನಕುಲ 3. ವರಾತ 5. ಕರ್ತವ್ಯ 7. ಅನೃತ (=ಸುಳ್ಳು) 8. ರಸೀದಿ 9. ಭವಾನಿ 10. ತಿಜೋರಿ 12. ಹಳತು 14. ಶಾಶ್ವತ 15. ಬಾಲಕ 16. ಗಮಾರ

ಪ್ರಶ್ನಾಂಕಣ

## ಏನಿದು 'ದಿ ಪೆಸಿಫಿಕ್ ಗಾರ್ಬೇಜ್ ಪ್ಯಾಚ್'?

ಅದರ ಪೂರ್ಣ ಹೆಸರು 'ದಿ ಗ್ರೇಟ್ ಪೆಸಿಫಿಕ್ ಗಾರ್ಬೇಜ್ ಪ್ಯಾಚ್'! ಹೆಸರೇ ಸೂಚಿಸುವಂತೆ ಅದು ಪೆಸಿಫಿಕ್ ಮಹಾಸಾಗರದಲ್ಲಿ ರೂಪುಗೊಂಡಿರುವ ಒಂದು ಮಹಾನ್ ತಿಪ್ಪೆ ಸಾಮ್ರಾಜ್ಯ. ಹಾಗಿದ್ದೂ ಆ ಮಹಾ ಸಾಗರದ ಕಲ್ಪನಾತೀತ ವಿಸ್ತಾರದಿಂದಾಗಿ ಅದು ಕೇವಲ ಕಸದ ಒಂದು ತೇಪೆ (ಗಾರ್ಬೇಜ್ ಪ್ಯಾಚ್) ಯಂತೆ ಕಾಣುತ್ತದೆ ಅಷ್ಟೆ.

ಶಾಂತಸಾಗರದ ಉತ್ತರ ಭಾಗದಲ್ಲಿ ಹವಾಯ್ ದ್ವೀಪಸ್ತೋಮವನ್ನು ಪರಿವರಿಸಿದಂತೆ ಒಂದು 'ಸಾಗರ ಸುಳಿ' (ಓಷನ್ ಗೈರ್) ಅಸ್ತಿತ್ವದಲ್ಲಿದೆ (ಚಿತ್ರ3 ರಲ್ಲಿ ಬಾಣಗಳು ಸೂಚಿಸುತ್ತಿರುವ ಪ್ರದೇಶ). ದಕ್ಷಿಣ ಪೆಸಿಫಿಕ್‌ನಿಂದ ಉತ್ತರದ ಕಡೆಗೆ ಹರಿದು ಬರುವ ಉಷ್ಣೋದಕ ಪ್ರವಾಹ ಮತ್ತು ಉತ್ತರದ ಆರ್ಕ್ಟಿಕ್‌ನಿಂದ ದಕ್ಷಿಣದ ಕಡೆಗೆ ಬರುವ ಶೀತೋದಕ ಪ್ರವಾಹಗಳು ಇಲ್ಲಿ ಸಂಗಮಿಸುತ್ತವೆ. ಜೊತೆಗೆ ಈ ಪ್ರದೇಶದ ಮಾರುತಗಳು ಹಾಗೂ ಭೂ ಸ್ವಭ್ರಮಣದ ಪರಿಣಾಮಗಳೂ ಸೇರಿ ಈ ಮಹಾನ್ ಸಾಗರ ಸುಳಿ ಮೈದಳೆದಿದೆ.

'ದಿ ನಾರ್ತ್ ಪೆಸಿಫಿಕ್ ಗೈರ್' ಎಂಬ ಈ ಸಾಗರ ಪ್ರದೇಶದ ವಿಸ್ತಾರ ಎರಡು ಕೋಟಿ ಚದರ ಕಿಲೋ ಮೀಟರ್‌ನಷ್ಟಿದೆ. ಸಹಜವಾಗಿಯೇ ಉತ್ತರ ಪೆಸಿಫಿಕ್ ಸಾಗರಕ್ಕೆ ಬೀಳುವ ಸರ್ವ ವಿಧ ಮಾನವ ಮೂಲ ತೇಲುಕಸಗಳೂ ಕೂಡ ಈ ಸುಳಿ ಪ್ರದೇಶಕ್ಕೆ ಸೆಳೆಯಲ್ಪಟ್ಟು, ಇಲ್ಲಿಗೆ ತಲುಪಿ ಶೇಖರಗೊಳ್ಳುತ್ತಿವೆ. ಕೊಳೆವ ಕಸವೆಲ್ಲ ಅನತಿಕಾಲದಲ್ಲೇ ಕಣ್ಮರೆಯಾಗುತ್ತವೆ. ಹಾಗಾಗದೆ ಉಳಿವ ವಿಧ ವಿಧ ಪ್ಲಾಸ್ಟಿಕ್ ಕಸದ ರಾಶಿಗಳು ಮಾತ್ರ (ಚಿತ್ರ1, 2) ಅಲ್ಲೇ ಉಳಿದು, ದಿನೇ ದಿನೇ ಅಧಿಕಗೊಳ್ಳುತ್ತ, ಕಡಲಿನ ಮೇಲ್ಮೈನಿಂದ ಕೆಲ ಮೀಟರ್ ಆಳದವರೆಗೆ



ಸಾಂದ್ರಗೊಂಡು ತೇಲುತ್ತ ಈ ಭಯಂಕರ, ಅಪಾಯಕರ 'ಗಾರ್ಬೇಜ್ ಪ್ಯಾಚ್' ಅನ್ನು ರೂಪಿಸಿವೆ.

ಪೆಸಿಫಿಕ್ ಮಹಾ ಸಾಗರದಲ್ಲಿನ ಈ ಪ್ಲಾಸ್ಟಿಕ್ ಕಸ ಸಾಮ್ರಾಜ್ಯದಲ್ಲಿ ಅಪಾರ ಸಂಖ್ಯೆಯ ಸೂಕ್ಷ್ಮ ಪ್ಲಾಸ್ಟಿಕ್ (ಮೈಕ್ರೋ ಪ್ಲಾಸ್ಟಿಕ್) ಕಣಗಳಿವೆ; ಅವು ಈ ಇಡೀ ಪ್ರದೇಶದ ನೀರನ್ನು ಹಾಲಿನಂತೆ ಬೆಳ್ಳಗಾಗಿಸಿವೆ. ಜೊತೆಗೆ ಪ್ಲಾಸ್ಟಿಕ್ ಹಾಳೆಗಳು, ನೀರಿನ ಬಾಟಲಿಗಳು, ಪ್ಲಾಸ್ಟಿಕ್ ಕೈ ಚೀಲಗಳು, ಮೀನು ಹಿಡಿವ ಬಲೆಗಳು, ಚಪ್ಪಲಿ, ಶೂಗಳು.. ಕಡೆಗೆ ಮುರಿದ ಕಂಪ್ಯೂಟರ್ ಮಾನಿಟರ್‌ಗಳವರೆಗೆ ತ್ಯಾಜ್ಯ ವಸ್ತುಗಳು ದಟ್ಟೈಸಿವೆ. ಒಂದು ಸರ್ವೇಕ್ಷಣೆಯ ಪ್ರಕಾರ ಈಗಾಗಲೇ 'ದಿ ಗ್ರೇಟ್ ಪೆಸಿಫಿಕ್ ಗಾರ್ಬೇಜ್ ಪ್ಯಾಚ್'ನಲ್ಲಿ ಕನಿಷ್ಠ 36 ಲಕ್ಷ ಕೋಟಿ ಪ್ಲಾಸ್ಟಿಕ್ ಕಸದ ಚೂರುಗಳಿವೆ; ಅವುಗಳ ಒಟ್ಟು ತೂಕ ಒಂದು ಲಕ್ಷ ಟನ್ ಮೀರುವಷ್ಟಿದೆ!

ಸ್ಪಷ್ಟವಾಗಿಯೇ ಈ ಪ್ಲಾಸ್ಟಿಕ್ ಕಸದ ಮಹಾನ್ ಸಂಗ್ರಹ ಅಲ್ಲಿನ ಸರ್ವ ವಿಧ ಜೀವಿಗಳಿಗೆ ಎಂದರೆ ಸೂಕ್ಷ್ಮ ಪ್ಲಾಂಕ್ಟನ್‌ಗಳಿಂದ ತಿಮಿಂಗಿಲಗಳವರೆಗೆ ಮಾರಕವಾಗಿದೆ. ಆ ಪ್ರದೇಶದ ಕನಿಷ್ಠ 700 ಪ್ರಭೇದಗಳ ಸಾಗರ ಪ್ರಾಣಿಗಳು ತೀವ್ರ ಸಂಕಷ್ಟಕ್ಕೆ ಸಿಲುಕಿವೆ. ವಿಪರ್ಯಾಸ ಏನೆಂದರೆ ಇದೆಲ್ಲ ತಿಳಿದಿದ್ದೂ ಯಾವ ರಾಷ್ಟ್ರಕ್ಕೂ ಸೇರಿಲ್ಲದ ಈ ಪ್ರದೇಶವನ್ನು ಸ್ವಚ್ಛಗೊಳಿಸುವ ಅಥವಾ ಪ್ಲಾಸ್ಟಿಕ್ ಕಸದ ಸೇರ್ಪಡೆಯನ್ನು ನಿಯಂತ್ರಿಸುವ ಆಸಕ್ತಿ ಮತ್ತು ಜವಾಬ್ದಾರಿ ಯಾರಿಗೂ ಇಲ್ಲವಾಗಿದೆ!

■ ಎನ್. ವಾಸುದೇವ್